# **<u>ಪ್ರಧಾನ  ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>**

## **<u>ಸಿ.ಸಿ.1577/2019</u>**

<u>ಸಾಕ್ಷಿದಾರರ ಹೇಳಿಕೆಃ</u>

**ಹೆಸರು** : ಸಂದೀಪ್ ಅಬ್ಬು ಡಿಡಬ್ಲ್ಯೂಃ**1**

**ತಂದೆಯ ಹೆಸರು** : ನಂದಕುಮಾರ್

**ವಯಸ್ಸು** : 41 ವರ್ಷ

**ವೃತ್ತಿ** : ಬ್ಯಾಂಕ್ ಮ್ಯಾನೇಜರ್

**ವಾಸಸ್ಥಳ** : ಹೊನ್ನಾಳಿ

ದಿನಾಂಕಃ **26-12-2024** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ :-ಆರೋಪಿ ಪರ ವಕೀಲರಿಂದ:-</u>

ನಾನು 2022 ರಿಂದ ಇಲ್ಲಿಯವರೆಗೂ ಕರ್ನಾಟಕ ಬ್ಯಾಂಕ್ ಬೆಳಗುತ್ತಿ ಬ್ರಾಂಚ್ ನಲ್ಲಿ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಿಪಿ-1 ಚೆಕ್ಕು ಮತ್ತು ಚೆಕ್ ನಂಬರ್ ಕರ್ನಾಟಕ ಬ್ಯಾಂಕ್ ಬೆಳಗುತ್ತಿ ಶಾಖೆಗೆ ಸಂಬಂಧಪಟ್ಟಿದ್ದು. ನಿಪಿ-1 ಚೆಕ್ಕು ಸಿದ್ದನಗೌಡ ಬಿನ್ ನಾಗಬಸಪ್ಪರವರಿಗೆ ಸಂಬಂಧಪಟ್ಟಿದ್ದು. ಆರೋಪಿಯು ಬ್ಯಾಂಕ್ ಖಾತೆಯನ್ನು ತೆಗೆಯುವ ಸಮಯದಲ್ಲಿ ಅರ್ಜಿಯನ್ನು ಬರೆದುಕೊಟ್ಟಿದ್ದು ಸದರಿ ಅರ್ಜಿ ಮತ್ತು ಅರ್ಜಿಯಲ್ಲಿರುವ ಆರೋಪಿಯ ಸಹಿ ಮತ್ತು ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಅರ್ಜಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಅರ್ಜಿದಾರರ ಸಹಿ ಎ.ಸಿದ್ದನಗೌಡ ಎಂದು ನಮೂದಾಗಿದೆ ಮತ್ತು ನಿಪಿ-1 ರಲ್ಲಿ ಖಾತೆದಾರರ ಸಹಿ ಸಿದ್ದಪ್ಪ ಎಂದು ನಮೂದಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಿಡಿ-1 ಮತ್ತು ನಿಪಿ-1 ರಲ್ಲಿ ಸಹಿ ತಾಳೆಯಾಗುವುದಿಲ್ಲ. ನಿಪಿ-1 ಚೆಕ್ಕನ್ನು ಹಾಜರುಪಡಿಸಿದಾಗ ನಿಪಿ-2 ರಂತೆ ಸಾಕಷ್ಟು ಹಣ ಇಲ್ಲ ಎಂದು ಮತ್ತು ಸಹಿ ತಾಳೆಯಾಗುವುದಿಲ್ಲ ಎಂದು ಕೊಡಬಹುದು. ನಿಪಿ-1 ಚೆಕ್ಕನ್ನು

ಹಾಜರುಪಡಿಸಿದಾಗ ಸಹಿ ತಾಳೆಯಾಗುವುದಿಲ್ಲ ಎಂದು ಹಿಂಬರಹವನ್ನು ಕೊಡಬಹುದು. ನಿಪಿ-2 ಹಿಂಬರಹವನ್ನು ಕರ್ನಾಟಕ ಬ್ಯಾಂಕ್ ಹೊನ್ನಾಳಿ ಶಾಖೆಯವರು ನೀಡಿರುತ್ತಾರೆ. ಕರ್ನಾಟಕ ಬ್ಯಾಂಕ್ ಹೊನ್ನಾಳಿ ಶಾಖೆ ಮತ್ತು ಬೆಳಗುತ್ತಿ ಶಾಖೆಯ ಬ್ಯಾಂಕ್ ಒಂದೇ ಬ್ಯಾಂಕ್ ಆಗಿದ್ದರಿಂದ ಹೊನ್ನಾಳಿ ಬ್ಯಾಂಕ್ ಶಾಖೆಯವರು ಆನ್ ಲೈನ್ ನಲ್ಲಿ ಪರಿಶೀಲಿಸಿ ಹಿಂಬರಹವನ್ನು ಕೊಟ್ಟಿದ್ದಾರೆ.

<u>ಪಾಟೀ ಸವಾಲುಃ ಪೀರ್ಯಾದಿಪರ ವಕೀಲರಿಂದಃ</u>

ನಿಪಿ-1 ಚಕ್ಕಿನಲ್ಲಿ ನಮೂದಾಗಿರುವ ಖಾತೆ ಸಂಖ್ಯೆ ಸಿದ್ದನಗೌಡ ಎಂಬುವವರಿಗೆ ಸೇರಿದ್ದು ಎಂದರೆ ಸರಿ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.